# ಗಾಯನ-ವಾದನ ಪ್ರತಿಭೆ ಮೈಸೂರು ದೀಪಕ್



ಎಂಜಿನಿಯರಿಂಗ್ ಪದವೀಧರ ಮೈಸೂರು ದೀಪಕ್ ತಾಂತ್ರಿಕ ಕ್ಷೇತ್ರವನ್ನು ಬಿಟ್ಟು ನಾದಲೋಕಕ್ಕೆ ಆತುಕೊಂಡಿದ್ದಾರೆ. ಕರ್ನಾಟಕ ಶಾಸ್ತ್ರೀಯ ಗಾಯನದ ಜತೆಗೆ ತಂತಿವಾದ್ಯ ಮ್ಯಾಂಡೊಲಿನ್ ನುಡಿಸಾಣಿಕೆಯನ್ನೂ ಕರಗತ ಮಾಡಿಕೊಂಡು ಹತ್ತು ಹಲವು ವೇದಿಕೆಗಳಲ್ಲಿ ಮಿಂಚುತ್ತಿದ್ದಾರೆ.

■ ಉಮಾ ಅನಂತ್

ಹಾಸನ ಜಿಲ್ಲೆ ಅರಕಲಗೂಡು ಸಮೀಪದ ರುದ್ರಪಟ್ಟಣ ಸಂಗೀತಕ್ಕೆ ವಿಶ್ವಪ್ರಸಿದ್ಧ. ಪ್ರತೀ ವರ್ಷ ಅದ್ಧೂರಿಯಾಗಿ ನಡೆಯುವ ರುದ್ರಪಟ್ಟಣ ಸಂಗೀತೋತ್ಸವದಲ್ಲಿ ರಾಷ್ಟ್ರ, ರಾಜ್ಯಮಟ್ಟದ ಸಂಗೀತ ಕಲಾವಿದರು ಸಂಗೀತ ಸಮಾರಾಧನೆ ಮಾಡಿ ಸಂಗೀತೋತ್ಸವವನ್ನು ಯಶಸ್ವಿಗೊಳಿಸುವುದು ಹಲವು ವರ್ಷಗಳಿಂದ ನಡೆದುಕೊಂಡು ಬಂದ ಸಂಪ್ರದಾಯ. ಇಲ್ಲಿನ ಸಪ್ತಸ್ವರ ದೇವತಾ ಧ್ಯಾನಮಂದಿರ ತಂಬೂರಿ ಆಕಾರದಲ್ಲಿದ್ದು, ನೋಡುಗರಲ್ಲಿ ದೈವಿಕ ಮನೋಭಾವವನ್ನು ಮೂಡಿಸುತ್ತದೆ. ಇದರ ರೂವಾರಿ ಕರ್ನಾಟಕ ಸಂಗೀತದ ಮೇರು ಗಾಯಕ ವಿದ್ವಾನ್ ಆರ್.ಕೆ. ಪದ್ಮನಾಭ.

ಈ ಸಂಗೀತೋತ್ಸವದಲ್ಲಿ ಕಳೆದ ಬಾರಿ ಹಾಡಿದ ಯುವ ಗಾಯಕ ಮೈಸೂರು ದೀಪಕ್ ಈಗಾಗಲೇ ಶಾಸ್ತ್ರೀಯ ಸಂಗೀತ ಹಾಗೂ ಮ್ಯಾಂಡೊಲಿನ್ ವಾದನದಲ್ಲಿ ಛಾಪು ಮೂಡಿಸುತ್ತಾ ಸಂಗೀತ ವಲಯದಲ್ಲಿ ಕೇಳುಗರ ಮೆಚ್ಚುಗೆ ಗಳಿಸುತ್ತಿರುವವರು. ರುದ್ರಪಟ್ಟಣ ಸಂಗೀತೋತ್ಸವದಲ್ಲಿ ಇವರ ಸಂಗೀತ ಕಛೇರಿ ಕೇಳುಗರನ್ನು ರೋಮಾಂಚನಗೊಳಿಸಿತು. ಸ್ವರಾಲಾಪ, ರಾಗಗಳ ಪ್ರಸ್ತುತಿ, ಅಚ್ಚುಕಟ್ಟಾದ ನೆರವಲ್, ಅದ್ಭುತ ಕಲ್ಪನಾಸ್ವರ (ಮನೋಧರ್ಮ) ಜತೆಗೆ ರಾಗ–ತಾನ–ಪಲ್ಲವಿಗಳ ವಿದ್ವತ್ಪೂರ್ಣ ನಿರೂಪಣೆ ಇವರ ಸಂಗೀತ ಭವಿಷ್ಯದ ಮೇಲೆ ಉತ್ತಮ ಭಾಷ್ಯ ಬರೆಯಿತು.

ಹಾಗೆ ನೋಡಿದರೆ ಮೈಸೂರು ದೀಪಕ್ ಓದಿದ್ದು ಎಲೆಕ್ಟ್ರಾನಿಕ್ಸ್‌ನಲ್ಲಿ ಎಂಜಿನಿಯರಿಂಗ್ ಪದವಿ. ಆದರೆ ಇವರಿಗೆ ಒಲಿದದ್ದು ಸಂಗೀತ. ಶಾಸ್ತ್ರೀಯ ಹಾಡುಗಾರಿಕೆ ಜತೆಗೆ ಮ್ಯಾಂಡೊಲಿನ್ ನುಡಿಸಾಣಿಕೆಯಲ್ಲೂ ಪಳಗಿದ್ದಾರೆ ದೀಪಕ್. ಹಾಡುಗಾರಿಕೆಯನ್ನು ಎತ್ತರಕ್ಕೆ ಬೆಳೆಸಿದವರು ಗಾನಕಲಾಭೂಷಣ ಆರ್.ಕೆ. ಪದ್ಮನಾಭ ಅವರು. ಮ್ಯಾಂಡೊಲಿನ್ ನುಡಿಸುವ ಕಲೆಗಾರಿಕೆ, ತಂತ್ರಗಾರಿಕೆಗಳನ್ನು ದೀಪಕ್ ವಿಶ್ವವಿಖ್ಯಾತ ಕಲಾವಿದರಾಗಿದ್ದ ಮ್ಯಾಂಡೊಲಿನ್ ಯು. ಶ್ರೀನಿವಾಸ್ ಅವರ ಬಳಿಯೇ ಕಲಿತುಕೊಂಡಿದ್ದರು. ಅಷ್ಟೇ ಅಲ್ಲ ಹಲವು ವೇದಿಕೆಗಳನ್ನು ಮ್ಯಾಂಡೊಲಿನ್ ತಂತಿಗಳನ್ನು ಮೀಟಿ ಕೇಳುಗರಿಂದ ಚಪ್ಪಾಳೆಯ ಸುರಿಮಳೆ ಗಿಟ್ಟಿಸಿಕೊಂಡಿದ್ದಾರೆ.

ಕರ್ನಾಟಕ ಗಾನ ಕಲಾಪರಿಷತ್ತು ಯುವ ಸಮಿತಿಯ ಸದಸ್ಯರಾಗಿರುವ ದೀಪಕ್, ಸ್ವಂತ ಊರು ಮೈಸೂರು. ತಮ್ಮ ಏಳನೇ ವಯಸ್ಸಿನಲ್ಲೇ ದೀಪಕ್ ಸಂಗೀತ ಕಲಿಯಲಾರಂಭಿಸಿದ ಇವರು ವಿದುಷಿ ವಿಮಲಮ್ಮ, ಪುಷ್ಪಾ ಶ್ರೀನಿವಾಸ್ ವಿದ್ವಾನ್ ಗುರುಪ್ರಸಾದ್ ಅವರ ಬಳಿ ಶಾಸ್ತ್ರೀಯ ಸಂಗೀತ ಕಲಿತವರು. ಜತೆಗೆ ವಿದ್ವಾನ್ ಪ್ರಸನ್ನಕುಮಾರ್ ಅವರ ಬಳಿ ಮ್ಯಾಂಡೊಲಿನ್ ನುಡಿಸುವುದನ್ನೂ ಕಲಿತರು. ಸಂಗೀತದ ತ್ರಿಸ್ಥಾಯಿಗಳಲ್ಲೂ ಲೀಲಾಜಾಲವಾಗಿ ಹಾಡುವ ಚಾಕಚಕ್ಯತೆ ಹೊಂದಿರುವ ದೀಪಕ್, ಕೀರ್ತನೆಯ ಮಧ್ಯೆ ಸೇರಿಸುವ ಸ್ವರಪ್ರಸ್ತಾರದ ವೈವಿಧ್ಯ ಕೇಳುಗರಿಗೆ ರೋಮಾಂಚಕ ಹಾಗೂ ಮನಮೋಹಕ ಅನುಭವ ನೀಡುತ್ತದೆ. ಹೀಗಾಗಿ ಇವರ ಕಛೇರಿಯನ್ನು ಎಲ್ಲ ವರ್ಗದ ಜನರೂ ಸಮಾನವಾಗಿ ಆಸ್ವಾದಿಸುತ್ತಾರೆ, ಬೆನ್ನು ತಟ್ಟಿ ಪ್ರೋತ್ಸಾಹಿಸುತ್ತಾರೆ, ಮುಕ್ತ ಮನಸ್ಸಿನಿಂದ ಕೊಂಡಾಡುತ್ತಾರೆ.

ಗಾಯನದ ಜತೆಗೆ ಅಷ್ಟೋತ್ತರ ಶತ ತಾಳಗಳು ಹಾಗೂ ಮೇಳಕರ್ತ ರಾಗಗಳಲ್ಲಿ ರಾಗ–ತಾನ–ಪಲ್ಲವಿಯನ್ನು ವಿದ್ವತ್ಪೂರ್ಣವಾಗಿ ನಿರೂಪಿಸುತ್ತಾರೆ. ಹಾಡುಗಾರಿಕೆ, ತಂತಿ ವಾದನ ಮಾತ್ರವಲ್ಲದೆ ದೀಪಕ್ ಕೆಲವು ಕೃತಿಗಳನ್ನೂ ರಚಿಸಿದ್ದಾರೆ. 'ವಾದಿರಾಜದಾಸ' ಎಂಬ ಅಂಕಿತದಲ್ಲಿ ದೀಪಕ್ ಬರೆದಿರುವ ಸುಮಾರು 50 ಕೃತಿಗಳು ಸಂಗೀತ ಕ್ಷೇತ್ರದ ಇವರ ಸಾಧನೆಗೆ ವಿಭಿನ್ನ ಆಯಾಮವನ್ನೇ ನೀಡುತ್ತವೆ.

ರಾಷ್ಟ್ರಪತಿ ಭವನ, ರುದ್ರಪಟ್ಟಣ, ತಿರುಮಲ–ತಿರುಪತಿ ದೇವಸ್ಥಾನ, ವೆಲ್ಲೂರು ದೇವಸ್ಥಾನ, ಮುಂಬಯಿ ಕನ್ನಡ ಸಂಘ, ಜಯರಾಮ ಸೇವಾ ಮಂಡಲಿ, ನಾದಬ್ರಹ್ಮ ಕಲಾಕೇಂದ್ರ ಮುಂತಾದ ಕಡೆಗಳಲ್ಲಿ ಪೂರ್ಣ ಪ್ರಮಾಣದ ಕಛೇರಿ ನೀಡಿ ಸಂಗೀತದ ಅನುಭವಗಳ ಮೆಟ್ಟಿಲುಗಳಿಗೆ ಒಂದೊಂದೇ ಯಶಸ್ಸಿನ ಗರಿಗಳನ್ನು ಸೇರಿಸುತ್ತಿದ್ದಾರೆ.

ಬೆಂಗಳೂರಿನಲ್ಲಿ 'ನಾದಾಮೃತ' ಎಂಬ ಸಂಗೀತ ಶಾಲೆಯನ್ನು ನಡೆಸಿಕೊಂಡು ಬರುತ್ತಿರುವ ದೀಪಕ್, ನೂರಾರು ಮಕ್ಕಳಿಗೆ ಸಂಗೀತದ ಸರಿಗಮಪ, ಸಪ್ತಸ್ವರಗಳ ರುಚಿ ಉಣಿಸಿದ್ದಾರೆ. ಗುರುಗಳ ನಿಷ್ಠೆ, ಶಿಷ್ಯನ ಸಾಧನೆ ಎರಡೂ ಮಕ್ಕಳ ಶಿಸ್ತಿನ ಕಲಿಕೆಯಲ್ಲಿ ಪಡಿಮೂಡಿಸುತ್ತಿದ್ದಾರೆ.

## ನಟನೆಯಲ್ಲೂ ಕೈಚಳಕ

ಸಂಗೀತ ಮಾತ್ರವಲ್ಲದೆ ನಾಟಕಗಳಲ್ಲಿ ಪಾತ್ರ ಮಾಡುವ ಮೂಲಕ ನಟನಾ ಕ್ಷೇತ್ರದಲ್ಲೂ ಕೈಚಳಕ ತೋರಿಸುತ್ತಿದ್ದಾರೆ. 'ನಾದ', ವಾದಿರಾಜ ವೈಭವ, ಪುರಂದರ ಮಹಿಮಾ.. ಮುಂತಾದ ಗೇಯ ನಾಟಕಗಳಲ್ಲಿ ನಟಿಸಿದ್ದಾರೆ. 'ಬದುಕು, ಅಗ್ನಿ ಸಾಕ್ಷಿ, ಮದುಮಗಳು, ಮಹಾಭಾರತ ಮುಂತಾದ ಧಾರಾವಾಹಿಗಳಲ್ಲೂ ಅಭಿನಯಿಸಿ ಪಾತ್ರಕ್ಕೆ ಜೀವ ತುಂಬಿ ಸಕ್ರಿಯರಾಗಿದ್ದಾರೆ.

ಈ ಯುವ ಕಲಾವಿದ ಇನ್ನಷ್ಟು ಎತ್ತರಕ್ಕೆ ಬೆಳೆದು ಸಂಗೀತ ಕ್ಷೇತ್ರದಲ್ಲಿ ವಿಜೃಂಭಿಸಲಿ ಎಂದು ಹಾರೈಸೋಣವೇ? ■